CFO

Commissioner
Bengaluru Mahanagara Palike

ಕರ್ನಾಟಕ ಸರ್ಕಾರದ ನಡವಳಿ

ವಿಷಯ: 2016-17ನೇ ಮತ್ತು 2017-18ನೇ ಸಾಲಿನ ನಗರೋತ್ಥಾನ ಯೋಜನೆ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಒದಗಿಸಿರುವ ರೂ.7300.00 ಕೋಟಿಗಳ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016ರ ಅನುಬಂಧ-6 ರಲ್ಲಿನ ಕಾಮಗಾರಿಗಳ ಬದಲಾಗಿ ಬದಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016.

2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆಯುಕ್ತರು/ಬಿಬಿಎಂ/151/2018-19, ದಿನಾಂಕ: 25-01-2019.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 21-06-2016ರ ಆದೇಶದಲ್ಲಿ ನಗರೋತ್ಥಾನ ಯೋಜನೆ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2016-17 ಮತ್ತು 2017-18ನೇ ಸಾಲಿನಲ್ಲಿ ಒಟ್ಟು ರೂ.7300.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಅನುಮೋದನೆಯನ್ನು ನೀಡಲಾಗಿದ್ದು, ಕ್ರಿಯಾ ಯೋಜನೆಯ ಅನುಬಂಧ-06ರ ಕ್ರಮ ಸಂಖ್ಯೆ (1) ರಲ್ಲಿ "Repairs and Developmental works in Krishana rajendra Market Mutton market Chamarajapete Constituency"ರ ಕಾಮಗಾರಿಗೆ ರೂ.700.00 ಲಕ್ಷಗಳನ್ನು, (2) ರಲ್ಲಿ "Repairs and Developmental works in Russel Market Mutton market Shivajinagar Constituency"ರ ಕಾಮಗಾರಿಗೆ ರೂ.400.00 ಲಕ್ಷಗಳನ್ನು ಮತ್ತು (3) ರಲ್ಲಿ "Development Johnsson Market in Shanthinagar Constituency"ರ ಕಾಮಗಾರಿಗೆ ರೂ.400.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 25-01-2019ರ ಪ್ರಸ್ತಾವನೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸರ್ಕಾರದ 2016-17 ಮತ್ತು 2017-18ನೇ ಸಾಲಿನ ನಗರೋತ್ಥಾನ ಯೋಜನೆ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿವಿಧ ಯೋಜನೆಗಳಿಗೆ ರೂ.7300.00 ಕೋಟಿಗಳ ಅನುದಾನವನ್ನು ಸಾಲುಗಳಿಗೆ ಒದಗಿಸಿದ್ದು, ಈ ಪೈಕಿ ಕೆ.ಆರ್. ಮಾರುಕಟ್ಟೆ, ಜಾನ್ಸನ್ ಮಾರುಕಟ್ಟೆ, ರಸಲ್ ಮಾರುಕಟ್ಟೆ ಮತ್ತು ಕಲಾಸಿಪಾಳ್ಯ ಮಾರುಕಟ್ಟೆ ಅಭಿವೃದ್ಧಿ ಕಾಮಗಾರಿಗಳಿಗೆ ರೂ.25.00 ಕೋಟಿಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

. . . 2 .

Scanned with CamScanner

3. ಅನುಮೋದನೆಗೊಂಡ ಈ ಮಾರುಕಟ್ಟೆಗಳ ಪೈಕಿ ಕಲಾಸಿಪಾಳ್ಯ ಮಾರುಕಟ್ಟೆ ಅಭಿವೃದ್ಧಿ ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿ ರುತ್ತದೆ. ಉಳಿದಂತೆ ಕೆ.ಆರ್. ಮಾರುಕಟ್ಟೆ, ಜಾನ್ಸನ್ ಮಾರುಕಟ್ಟೆ, ರಸಲ್ ಮಾರುಕಟ್ಟೆಗಳನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಸಮಗ್ರವಾಗಿ ಅಭಿವೃದ್ಧಿಪಡಿಸಲು ಯೋಜಿಸಿದ್ದರಿಂದ ಪಾಲಿಕೆಯಿಂದ ಈ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವುದಿಲ್ಲ.

4. ಮುಂದುವರೆದು, ದಿನಾಂಕ: 03-10-2018 ರಂದು ನಡೆದ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ನಿರ್ದೇಶಕ ಮಂಡಳಿಯ 4ನೇ ಸಭೆಯಲ್ಲಿ, ಈ ಮೇಲೆ ತಿಳಿಸಿದ 3 ಮಾರುಕಟ್ಟೆಗಳ ನಿರ್ಮಾಣಕ್ಕೆ ಅನುದಾನವನ್ನು ಸ್ಮಾರ್ಟ್ ಸಿಟಿ ಅನುದಾನದಲ್ಲಿ ಒದಗಿಸುತ್ತಿರುವುದಾಗಿ ತಿಳಿಸಲಾಗಿರುತ್ತದೆ. ಪೂಜ್ಯ ಮಹಾಪೌರರ ಟಿಪ್ಪಣಿ ದಿನಾಂಕ: 23-11-2018 ರಲ್ಲಿ "ಕೆ.ಆರ್. ಮಾರುಕಟ್ಟೆ, ಜಾನ್ಸನ್ ಮಾರುಕಟ್ಟೆ, ರಸಲ್ ಮಾರುಕಟ್ಟೆಗಳನ್ನು ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಯೋಜನೆ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿರುವುದರಿಂದ ಸದರಿ ಮಾರುಕಟ್ಟೆಗಳ ಅಭಿವೃದ್ಧಿಗಾಗಿ ಮೀಸಲಿರಿಸಿರುವ ರೂ.15.00 ಕೋಟಿಗಳ ಮೊತ್ತವು ಬಳಕೆಯಾಗದಿರುವುದರಿಂದ ಸದರಿ ಅನುದಾನದಲ್ಲಿ ತುರ್ತು ಅವಶ್ಯವಿರುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ತೀರ್ಮಾನಿಸಿರುತ್ತಾರೆ". ಮಾನ್ಯ ಉಪ ಮುಖ್ಯಮಂತ್ರಿಗಳು ಸದರಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

5. ಕೆ.ಆರ್. ಮಾರುಕಟ್ಟೆ, ಜಾನ್ಸನ್ ಮಾರುಕಟ್ಟೆ, ರಸಲ್ ಮಾರುಕಟ್ಟೆ ಗಳನ್ನು ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಯೋಜನೆ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿರುವುದರಿಂದ ಈ ಕಾಮಗಾರಿಗಳಿಗೆ ನಗರೋತ್ಥಾನ ಯೋಜನೆಯಡಿ ಮೀಸಲಿಟ್ಟಿದ್ದರೂ ರೂ.15.00 ಕೋಟಿ [illegible] ಆಗದಿರುವುದರಿಂದ ಈ ಕೆಳಕಂಡ ಬದಲಿ [illegible] ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಕ್ರ ಸಂ.	ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016ರ ಅನುಬಂಧ-6ರ ಕ್ರಮ ಸಂಖ್ಯೆ 1, 2 ಮತ್ತು 3 ರಲ್ಲಿನ ಕಾಮಗಾರಿಗಳ ಅನುಮೋದನೆಯಾಗಿರುವ ಕಾಮಗಾರಿಯ ಹೆಸರು	ಮಂಜೂರಾತಿಯಾದ ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)	ಈಗ ಹೊಸದಾಗಿ ಅನುಮೋದನೆ ನೀಡಬೇಕಾಗಿರುವ ಕಾಮಗಾರಿಗಳ ಹೆಸರು	ಈಗ ಹೊಸದಾಗಿ ಅನುಮೋದನೆ ನೀಡಬೇಕಾಗಿರುವ ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)
1.	Repairs and Developmental works in Krishanarajendra Market Mutton market Chamarajapete Constituency	7.00	Construction of CC drains and development works in Ward No.1	3.00
2.	Repairs and Developmental works in Russel Market Mutton market Shivaji nagar Constituency	4.00	Construction of CC drains and development works in Ward No.2.	3.00
3.	Development Johnsson Market in Shanthinagar Constituency	4.00	Development and Improvement of roads, drains and footpath in Ward No.26, 52, 53 in KR Puram Assembly Constituency	9.00
	Total	15.00		15.00

...3.

Scanned with CamScanner

(iii) Preparation of the cost estimate to determine the [illegible] the assignment;

ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016ರ ಅನುಬಂಧಗಳ ಕ್ರಮ ಸಂಖ್ಯೆ: 04 ರಲ್ಲಿ "ಅನುಮೋದನೆ ನೀಡಲಾದ ಕ್ರಿಯಾ ಯೋಜನೆಯಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸತಕ್ಕದ್ದು. ಅನಿವಾರ್ಯ ಕಾರಣಗಳಿಂದ ಬದಲಾವಣೆಗಳು ಅತ್ಯಂತ ಅವಶ್ಯಕ ಎಂದು ಕಂಡು ಬಂದಲ್ಲಿ ಅಂತಹ ಕಾಮಗಾರಿಗಳನ್ನು ಸೂಕ್ತ ಸಮಜಾಯಿಷಿಯೊಂದಿಗೆ ಆಯುಕ್ತರು, ಬಿ.ಬಿ.ಎಂ.ಪಿ. ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು" ಎಂದು ಸ್ಪಷ್ಟಪಡಿಸಲಾಗಿದೆ. ಅದರಂತೆ ಪ್ರಸ್ತಾವನೆಯನ್ನು ಸರ್ಕಾರವು ಸೂಕ್ಷ್ಮವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 36 ಎಂಎನ್‌ಪೈ 2019
ಬೆಂಗಳೂರು, ದಿನಾಂಕ: 13-02-2019.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016ರ ಕ್ರಿಯಾ ಯೋಜನೆಯ ಅನುಬಂಧ-06ರ ಕ್ರಮ ಸಂಖ್ಯೆ: (1) ರಲ್ಲಿ "Repairs and Developmental works in Krishana rajendra Market Mutton market Chamarajapete Constituency"ರ ಕಾಮಗಾರಿಗೆ ರೂ.700.00 ಲಕ್ಷಗಳನ್ನು, (2) ರಲ್ಲಿ "Repairs and Developmental works in Russel Market Mutton market Shivajinagar Constituency"ರ ಕಾಮಗಾರಿಗೆ ರೂ.400.00 ಲಕ್ಷಗಳನ್ನು ಮತ್ತು (3) ರಲ್ಲಿ "Development Johnsson Market in Shanthinagar Constituency"ರ ಕಾಮಗಾರಿಗೆ ರೂ.400.00 ಲಕ್ಷಗಳ ಅನುದಾನದಲ್ಲಿ ಮಂಜೂರಾಗಿರುವ ಕಾಮಗಾರಿಯ ಬದಲಾಗಿ, ಅದೇ ಮೊತ್ತದಲ್ಲಿ ಕೈಗೆತ್ತಿಕೊಳ್ಳುವ ಈ ಕೆಳಕಂಡ ಬದಲಿ ಕಾಮಗಾರಿಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

ಕ್ರ ಸಂ.	ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016ರ ಅನುಬಂಧ-6ರ ಕ್ರಮ ಸಂಖ್ಯೆ 1, 2 ಮತ್ತು 3 ರಲ್ಲಿನ ಕಾಮಗಾರಿಗಳ ಅನುಮೋದನೆಯಾಗಿರುವ ಕಾಮಗಾರಿಯ ಹೆಸರು	ಮಂಜೂರಾತಿಯಾದ ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)	ಈಗ ಹೊಸದಾಗಿ ಅನುಮೋದನೆ ನೀಡಲಾಗಿರುವ ಕಾಮಗಾರಿಗಳ ಹೆಸರು	ಈಗ ಹೊಸದಾಗಿ ಅನುಮೋದನೆ ನೀಡಲಾಗಿರುವ ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)
1.	Repairs and Developmental works in Krishana rajendra Market Mutton market Chamarajapete Constituency	7.00	Construction of CC drains and development works in Ward No.1.	3.00
2.	Repairs and Developmental works in Russel Market Mutton market Shivaji nagar Constituency	4.00	Construction of CC drains and development works in Ward No.2.	3.00
3.	Development Johnsson Market in Shanthinagar Constituency	4.00	Development and improvement of roads, drains and footpath in Ward No.26, 52, 53 in KR Puram Assembly Constituency.	9.00
	Total	15.00		15.00

...4...

Scanned with CamScanner

(iii) Preparation of the

ಷರತ್ತುಗಳು:

1. ಈ ಆದೇಶದಲ್ಲಿ ನೀಡಿರುವ ಅನುಮೋದನೆಯು ಕಾಮಗಾರಿಗಳ ಕ್ರಿಯಾ ಯೋಜನೆಗೆ ನೀಡಿರುವ ಅನುಮೋದನೆಯೇ ಹೊರತು, ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆಯಲ್ಲ. ಆದ್ದರಿಂದ, ಅನುಮೋದನೆಗೊಂಡ ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ಸಿದ್ಧಪಡಿಸಿ, ನಿಯಮಾನುಸಾರ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದು, ಪ್ಯಾಕೇಜ್‌ವಾರು ಟೆಂಡರ್ ಕರೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

2. ಈ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳನ್ನು ಇತರೆ ಯಾವುದೇ ಯೋಜನೆಯಡಿಯಲ್ಲಿ ಪುನಾರಾವರ್ತನೆ ಆಗಿರುವುದಿಲ್ಲ ಎಂಬುದನ್ನು ಬಿ.ಬಿ.ಎಂ.ಪಿ.ಯು ಮೂರ್ವಾನ್ವಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

3. ಅನುಮೋದಿತ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು-2000ರಲ್ಲಿನ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಬಿ.ಬಿ.ಎಂ.ಪಿ. ವತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

4. ಅನುಮೋದನೆ ನೀಡಲಾದ ಕ್ರಿಯಾ ಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

5. ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-I), ದಿನಾಂಕ: 21-06-2016 ರಲ್ಲಿನ ಎಲ್ಲಾ ಷರತ್ತುಗಳನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

13/2/19
(ಆರ್.ಷಡಕ್ಷರಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನಸೌಧ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು/ಕಂಪೆಂಡಿಯಂ/ಇಲಾಖಾ ವೆಬ್‌ಸೈಟ್.

Scanned with CamScanner

(ii) Preparation